ಶ್ರೀರಂಗಪಟ್ಟಣ, ಕರಿಘಟ್ಟ ಏತ ನೀರಾವರಿ ಯೋಜನೆ

ಶ್ರೀ ರಮೇಶ್ ಬಂಡಿಸಿದ್ದೇಗೌಡ ಎ. ಬಿ. (ಶ್ರೀರಂಗಪಟ್ಟಣ):–

419 (957) ಮಾನ್ಯ ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಕರಿಘಟ್ಟ ಏತ ನೀರಾವರಿ ಪ್ರದೇಶವು ಮಳೆ ಆಶ್ರಿತ ಪ್ರದೇಶವಾಗಿದ್ದು, ಸದರಿ ಯೋಜನೆಯು ಹಲವಾರು ವರ್ಷಗಳಿಂದ ಕಾರ್ಯ ನಿರ್ವಹಿಸದೆ ಹಾಗೆ ಉಳಿದಿರುವುದರಿಂದ ಕಾಲುವೆಗಳೆಲ್ಲವು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು (ವಿವರ ಒದಗಿಸುವುದು);

ಆ) ಕಾಲುವೆಗೆ ನೀರು ಬಿಡುವ ಮುನ್ನ ಸದರಿ ಕಾಲುವೆ ಮತ್ತು ಸಿ.ಡಿ. ಕಾಮಗಾರಿಗಳ ದುರಸ್ತಿಗಾಗಿ ಕರಿಘಟ್ಟ ಏತ ನೀರಾವರಿ ಯೋಜನೆಗಳನ್ನು ಪುನಶ್ಚೇನಗೊಳಿಸಲು ಬಿಡುಗಡೆ ಮಾಡಿರುವ ಅನುದಾನ ಎಷ್ಟು (ವಿವರಗಳನ್ನು ಒದಗಿಸುವುದು)?

ಶ್ರೀ ಗೋವಿಂದ ಎಂ. ಕಾರಿಜೋಳ (ಮಾನ್ಯ ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):–

(ಅ) ಬಂದಿದೆ.

2010–11ನೇ ಸಾಲಿನಲ್ಲಿ ಯೋಜನೆಯ ಕಾಲುವೆಗಳ ದುರಸ್ತಿಗಾಗಿ ವಿಶೇಷ ಘಟಕ ಯೋಜನೆಯಡಿ ರೂ. 10.00 ಲಕ್ಷಗಳ ಅನುದಾನವನ್ನು ಒದಗಿಸಿ ಕಾಮಗಾರಿ ಪೂರ್ಣಗೊಳಿಸಲಾಗಿದೆ.

ಟಿ. ಎಂ. ಹೊಸೂರು ಶಾಖಾ ಕಾಲುವೆಯು ಸರಪಳಿ 3.30 ರಿಂದ 5.86 ಕಿ.ಮೀ. ವರೆಗೆ ಡೀಪ್ ಕಟ್‌ನಲ್ಲಿ ಹಾಯ್ದು ಹೋಗಿದ್ದು ಕಾಲುವೆಯ ತಳಮಟ್ಟ ತಲುಪಲು ಸುಮಾರು 1.00 ರಿಂದ 1.50 ಮೀಟರ್ ಆಳದ ವರೆಗೆ ಗಟ್ಟಿಕಲ್ಲಿನಲ್ಲಿ ಅಗೆತ ಮಾಡಬೇಕಾಗಿದ್ದು 2011–12ನೇ ಸಾಲಿನ ಪ್ರಧಾನ ಕಾಮಗಾರಿಗಳು–ಕೆರೆಗಳ ಆಧುನೀಕರಣ ಲೆಕ್ಕಶೀರ್ಷಿಕೆಯಡಿ ರೂ. 90.00 ಲಕ್ಷಗಳಿಗೆ ಅವಕಾಶ ಕಲ್ಪಿಸಿದೆ. ಪ್ರಸ್ತುತ ಅಂದಾಜಿಗೆ ಮಂಜೂರಾತಿ ನೀಡಿ ನಿಯಮಾನುಸಾರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಆ) ಈ ಯೋಜನೆಯ ಕಾಲುವೆ ಅಭಿವೃದ್ಧಿಗಾಗಿ (2008–09ನೇ ಸಾಲಿನಲ್ಲಿ) ರೂ. 5.00 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದೆ. 2010–11ನೇ ಸಾಲಿನಲ್ಲಿ ಯೋಜನೆಯ ಕಾಲುವೆ ಮತ್ತು ಸಿ.ಡಿ. ಕಾಮಗಾರಿಗಳ ಅಭಿವೃದ್ಧಿ, ದುರಸ್ತಿಗಾಗಿ ರೂ. 10.00 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

ಸಿ.ಡಿ.ಎಸ್. ವಿರಿಜಾ, ದೇವರಾಯ, ಆರ್.ಬಿ.ಎಲ್.ಎಲ್. ನಾಲಾಗಳ ದುರಸ್ತಿ

ಶ್ರೀ ರಮೇಶ್ ಬಂಡಿಸಿದ್ದೇಗೌಡ ಎ. ಬಿ. (ಶ್ರೀರಂಗಪಟ್ಟಣ):–

420 (958) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಬರುವ 300 ವರ್ಷಗಳ ಹಳೆಯ ಕಾಲುವೆಗಳಾದ ಸಿ.ಡಿ.ಎಸ್. ವಿರಿಜಾ ನಾಲಾ, ದೇವರಾಯನಾಲೆ, ಆರ್.ಬಿ.ಎಲ್.ಎಲ್. ಹಾಗೂ ಎಲ್.ಬಿ.ಎಲ್.ಎಲ್. ನಾಲೆಗಳ ದುರಸ್ತಿಗೆ ಸರ್ಕಾರ ಕೈಗೊಂಡ ಕ್ರಮಗಳೇನು;

(ಆ) ಈ ನಾಲೆಗಳ ಆಧುನೀಕರಣಕ್ಕೆ ಯಾವ ಯೋಜನೆ ಸರ್ಕಾರದ ಮುಂದಿದೆ; ಹಾಗಿದ್ದಲ್ಲಿ, ಈ ಯೋಜನೆಯ ಅಂದಾಜು ವೆಚ್ಚ ಎಷ್ಟು;

(ಇ) ಹಾಗಿದ್ದಲ್ಲಿ, ಈ ಸಾಲಿನಲ್ಲಿ ಈ ಯೋಜನೆಗೆ ಎಷ್ಟು ಹಣವನ್ನು ಸರ್ಕಾರದಿಂದ ಬಿಡುಗಡೆ ಮಾಡಲಾಗಿದೆ; ಎಷ್ಟು ವರ್ಷದಲ್ಲಿ ಈ ಯೋಜನೆಯನ್ನು ಪೂರ್ಣಗೊಳಿಸಲು ಅವಧಿ ನಿಗದಿಪಡಿಸಲಾಗಿದೆ (ವಿವರ ನೀಡುವುದು)?

ಶ್ರೀ ಬಸವರಾಜ ಬೊಮ್ಮಾಯಿ (ಮಾನ್ಯ ಜಲಸಂಪನ್ಮೂಲ ಸಚಿವರು):–

(ಅ) ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿನ ಹಳೆಯ ಕಾಲುವೆಗಳಾದ ಸಿ.ಡಿ.ಎಸ್. ವಿರಿಜಾ ನಾಲಾ, ದೇವರಾಯ ನಾಲೆ, ಆರ್.ಬಿ.ಎಲ್.ಎಲ್. ಹಾಗೂ ಎಲ್.ಬಿ.ಎಲ್.ಎಲ್. ನಾಲೆಗಳಲ್ಲಿ ಸೂಕ್ಷ್ಮ ಸ್ಥಳಗಳಲ್ಲಿ ಪಾರ್ಶ್ವ ಗೋಡೆ ನಿರ್ಮಾಣ, ಲೈನಿಂಗ್, ನಾಲೆಗಳ ಮೇಲೆ ಬರುವ ಕೆಲವು ಸೇತುವೆಗಳ ಪನರ್ ನಿರ್ಮಾಣ, ತೂಬುಗಳ ಪುನರ್ ನಿರ್ಮಾಣ ಮತ್ತು ರಿಪೇರಿ, ಏರಿ ಅಭಿವೃದ್ಧಿ ಮುಂತಾದ ದುರಸ್ತಿ ಕಾಮಗಾರಿಗಳನ್ನು ಹಾಗೂ ನಿರ್ವಹಣಾ ಕಾಮಗಾರಿಗಳಾದ ಜಂಗಲ್ ಮತ್ತು ಹೂಳು ತೆಗೆಯುವುದು ಮತ್ತು ಇತರೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಈ ಕಾಮಗಾರಿಗಳಿಗಾಗಿ ಕಳೆದ 5 ವರ್ಷಗಳಲ್ಲಿ (2006–07 ರಿಂದ 2010–11ರ ವರೆಗೆ) ಒಟ್ಟು ರೂ. 47.41 ಕೋಟಿ ವೆಚ್ಚ ಮಾಡಲಾಗಿರುತ್ತದೆ. ಅಣೆಕಟ್ಟೆ ನಾಲಾವಾರು/ವರ್ಷವಾರು ವೆಚ್ಚದ ವಿವರ ಇಂತಿವೆ: